OS 53/2018

ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 20-09-2021**

ಮುಂದುವರಿದ ಪಾಟೀ ಸವಾಲು ಃ 1 ನೇ ಪ್ರತಿವಾದಿ ಪರಃ ಶ್ರೀ ಐ ಆರ್ ಬಿ ವಕೀಲರಿಂದಃ

1 ನೇ ಪ್ರತಿವಾದಿಯವರ ಗಂಡ ಕೃಷ್ಣ ಯಾನೆ ಹಾಲು ನಾಯಕ್‌ರವರನ್ನು ನಾನು ನೋಡಿರುವುದಿಲ್ಲ. ಅವರಿಗೆ ಜಾಗ ಎಲ್ಲಿ ಮಂಜುರಾಗಿರುತ್ತದೆ ಎಂದು ನನಗೆ ಗೊತ್ತಿದೆ. ಅವರಿಗೆ 4 ಜನ ಮಕ್ಕಳು. ಅಮಿತಾ ಮತ್ತು ಸರಿತಾ ಎಂಬ ಹೆಸರಿನ ಮಕ್ಕಳು 1 ನೇ ಪ್ರತಿವಾದಿಯವರಿಗೆ ಇಲ್ಲ ಎಂದು ನನಗೆ ನಂತರ ಗೊತ್ತಾಗಿರುತ್ತದೆ. ತಿಲಕ ಹೆಗ್ಡೆ ಎಂದರೆ ನನ್ನ ಅಕ್ಕ. ಅವರಿಗೆ ಬೆಂಗಳೂರಿಗೆ ಮದುವೆ ಮಾಡಿ ಕೊಟ್ಟಿರುತ್ತೇವೆ. ತಿಲಕ ಹೆಗ್ಡೆಯವರ ಪರವಾಗಿ ಈ ಪ್ರಕರಣ ದಾಖಲಿಸಲು ನಾನು ಅವರಿಂದ ಲಿಖಿತವಾಗಿ ಅನುಮತಿ ಪಡೆದಿರುವುದಿಲ್ಲ. ರಾಜೀವ ಶೆಟ್ಟಿಯವರು ನನ್ನ ತಂದೆ. ರಾಜೀವ ಶೆಟ್ಟಿ ವಿಠಲ ಶೆಟ್ಟಿ ಸುಮತಿ ಶೆಟ್ಟಿ ಯವರು ಜಂಟಿಯಾಗಿ ಖರೀದಿಸಿದ ಕ್ರಯಸಾಧನದ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ಮುಂದುವರಿದ ಪಾಟೀ ಸವಾಲಿಗೆ ಸಮಯಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ